ವಾಹನದಲ್ಲಿ ಮೆಲ್ಲಮೆಲ್ಲನೆ ಸಾಗುತ್ತಿತ್ತು, ಅದರ ಹಿಂದೆ ಇಬ್ಬರು ಮಿನಿಸ್ಟರ್‌ಗಳೊಂದಿಗೆ ನಾವು ಮೂವರು ಸಹೋದರರು ಕಪ್ಪು ಸೂಟು ಧರಿಸಿ ಹೋಗುತ್ತಿದ್ದೆವು; ನಮ್ಮ ಹಿಂದೆ ಅಪ್ಪ, ಜೂಲಿಯಾ, ನೀನಾ ಮತ್ತು ಪರಿವಾರದ ಇನ್ನಿತರ ಮಹಿಳೆಯರು ಕಪ್ಪು ಗೌನ್ ಧರಿಸಿ ಬರುತ್ತಿದ್ದರು; ಅವರ ಹಿಂದೆ ಅನೇಕ ಜನರಿದ್ದರು.

ಅಪ್ಪನ ಶವವನ್ನು ಈಸ್ಟ್‌ವುಡ್ ಸಿಮೆಟ್ರಿ ಗ್ರೌಂಡ್ ಸ್ಮಶಾನದಲ್ಲಿ ಅವರ ತಂದೆಯ ಪಕ್ಕದಲ್ಲಿ ಹೂಳಲಾಯಿತು. ನಮ್ಮ ಅಜ್ಜ ಈಸ್ಟ್‌ವುಡ್ ಸಿಮೆಟ್ರಿ ಗ್ರೌಂಡ್‌ನಲ್ಲಿ ನಮ್ಮೆಲ್ಲಾ ಸ್ಕಾಟ್ ವಂಶದವರನ್ನು ಹೂಳಲೋಸುಗ ಭೂಮಿಯನ್ನು ಖರೀದಿಸಿದ್ದರು. ಕರೆ ಬಂದಾಗ ಅಲ್ಲಿ ನಮಗೆಲ್ಲರಿಗೂ ಜಾಗವಿದೆ. ಅದರ ಕಂತನ್ನು ನಾವು ಪ್ರತಿ ತಿಂಗಳು ಭರಿಸುತ್ತೇವೆ.

ಮುತ್ತಜ್ಜನಿಗಿಂತ ಅಜ್ಜ ಹೆಚ್ಚು ಇಂಡಿಯನ್ ಎಂದು ತೋರುತ್ತಿದ್ದರು. ನನ್ನ ವೃದ್ಧ ಅಜ್ಜಿ ಬಿಳಿಯ ಬಣ್ಣವನ್ನು ಹೊಂದಿದ್ದು, ನಮಗೆ ಹೆಮ್ಮೆಯಿಂದ ಹೇಳುತ್ತಿದ್ದರು. ನಾನು ಆ ಸಮಾರಂಭದಲ್ಲಿ ಕಪ್ಪು ಕೂದಲಿನ, ಶ್ಯಾಮ ವರ್ಣದ, ಖಾಕಿ ಬಣ್ಣದ ಕಣ್ಣುಗಳ ಸುಂದರ ಪುರುಷನನ್ನು ನೋಡಿದಾಗ, ನಾನು ಸಹಜವಾಗಿ ಅವನೆಡೆಗೆ ಆಕರ್ಷಿತಳಾದೆ.' ನಾನೇಕೆ ನೀನಾಳನ್ನು ನೋಡಿ ಆಕರ್ಷಿತನಾದೆ? ಏಕೆಂದರೆ ನನ್ನ ಭಾರತೀಯ ಸಂಬಂಧದಿಂದಾಗಿ! ನೀನಾಳೊಂದಿಗಿನ ನನ್ನ ವಿವಾಹವನ್ನು ನಾನು ಅರೇಂಜ್ಡ್ ಮ್ಯಾರೇಜ್ ಎನ್ನುತ್ತಿದ್ದೆ. ನಾನು ಜನರಿಗೆ, 'ನನ್ನ ಗ್ರೇಟ್ ಗ್ರೇಟ್ ಗ್ರ್ಯಾಂಡ್ ಮದರ್ ನಮ್ಮ ವಿವಾಹವನ್ನು ನಿಶ್ಚಿತಗೊಳಿಸಿದರು' ಎಂದು ಹೇಳಿಕೊಂಡು ಅಲೆದಾಡುತ್ತಿದ್ದೆ. ಆದರೆ ನಮ್ಮ ವಿವಾಹವನ್ನು ಶಾಶ್ವತ ಸಂಬಂಧದಲ್ಲಿ ನೆಲೆಗೊಳಿಸುವಲ್ಲಿ ಗ್ರೇಟ್ ಗ್ರೇಟ್ ಗ್ರ್ಯಾಂಡ್ ಮದರ್ ಭೂಮಿಕೆ ಗೌಣವಾಗಿತ್ತು.

ನಾನು ಗ್ರೇಟ್ ಗ್ರೇಟ್ ಗ್ರ್ಯಾಂಡ್ ಮದ್ ಅವರ ಫೋಟೊವನ್ನು ನೋಡುತ್ತಿದ್ದೆ. ಅವರ ಎರಡು ಫೋಟೊಗಳನ್ನು ಹಾಕಲಾಗಿತ್ತು; ಮುಗ್ಧ ಯುವತಿಯಾಗಿದ್ದು, ಸೀರೆಯ ಮೇಲೆ ಕುರ್ತಾ ಆಕಾರದ ಬ್ಲೌಸ್ ಮತ್ತು ತಲೆಯ ಮೇಲೆ ಸೆರಗಿದ್ದ ಫೋಟೊ ಮೊದಲನೆಯದಾಗಿತ್ತು; ಒಬ್ಬ ಆತ್ಮವಿಶ್ವಾಸವುಳ್ಳ, ಪರಿಪಕ್ವ ಮಹಿಳೆಯಾಗಿದ್ದು, ಹಿಮ್ಮಡಿಯವರೆಗೆ ಸ್ಕರ್ಟ್ ಧರಿಸಿ, ತಲೆಯ ಮೇಲೆ ಹ್ಯಾಟ್ ಇದ್ದ ಫೋಟೊ ಎರಡನೆಯದಾಗಿತ್ತು. ಈಗ ಭಾರತದಲ್ಲಿ ಮಹಿಳೆಯರು ಸೀರೆ ಧರಿಸುವ ವಿಧಾನವೇ ಬದಲಾಗಿದೆ.

ಈ ಮನೆ ಮಾರಾಟವಾದಾಗ ಈ ಫೋಟೊಗಳು ಸಹ ನಮ್ಮ ಸಹೋದರಿ–ಸಹೋದರರಿಗೆ ಹಂಚಿಕೆಯಾಗುತ್ತವೆ. ಆ ಸಮಯ ಬಂದಾಗ ಗ್ರೇಟ್ ಗ್ರೇಟ್ ಗ್ರ್ಯಾಂಡ್ ಮದರರ ಎರಡೂ ಫೋಟೊಗಳನ್ನು ತಾನು ತೆಗೆದುಕೊಳ್ಳುವುದಾಗಿ ಜೂಲಿಯಾ ಘೋಷಿಸಿದ್ದಾಳೆ.

ಅಮ್ಮ ಸಂಜೆ ತಡವಾಗಿ ಮನೆಗೆ ಬಂದಳು, ಅವಳು ತುಂಬಾ ದಣಿದಿದ್ದಳು. ಅವಳು ತನ್ನ ಪರ್ಸ್ ಟೇಬಲ್ ಮೇಲಿಟ್ಟು, ನಿಟ್ಟುಸಿರು ಬಿಡುತ್ತಾ ಹೇಳಿದಳು, 'ಓಹ್, ಆ ಮನೆಯಿಲ್ಲದ ಮಕ್ಕಳು. ಎಲ್ಲರಿಗೂ ಅವರವರ ದುಃಖದ ಇತಿಹಾಸವಿದೆ. ಒಬ್ಬ ಹುಡುಗನ ತಂದೆಯನ್ನು ಒಂದು ತಿಂಗಳ ಹಿಂದೆ ಯಾರೋ ಕೊಂದರು. ಅವನ ಹೆಂಡತಿ ತನ್ನ ಪತಿಯನ್ನು ಕೊಂದಳು ಎಂಬ ಆರೋಪ ಅವನ ತಾಯಿಯ ಮೇಲಿದೆ. ತಾಯಿ ಜೈಲಿನಲ್ಲಿದ್ದಾಳೆ, ಮಗ ಮನೆಯಲ್ಲಿದ್ದಾನೆ. ಅವನೊಂದಿಗೆ ಕೆಲಸ ಮಾಡುವುದು ತುಂಬಾ ಕಷ್ಟ. ಅವನು ಮಾನಸಿಕವಾಗಿ ದುಃಖಿಯಾಗಿದ್ದಾನೆ. ಅವನಿಗೆ ಥೆರಪಿಯ ಅವಶ್ಯಕತೆಯಿದೆ. ಕಿಶೋರ ವಯಸ್ಸಿನ ಇಬ್ಬರು ಸಹೋದರಿಯರು ಕಳೆದ ವಾರವಷ್ಟೇ ಮನೆಗೆ ಬಂದಿದ್ದಾರೆ. ಅವರು ಸದಾ ಕಿರುಚುತ್ತಾರೆ. ಅವರ ತಂದೆ ನಾಲ್ಕು ವರ್ಷಗಳ ಮೊದಲು ಸತ್ತಿದ್ದರು. ಈಗ ತಾಯಿಗೂ ಕ್ಯಾನ್ಸರ್ ಆಗಿದೆ. ಅವಳು ಸಹ ಸಾಯುವ ಸ್ಥಿತಿಯಲ್ಲಿದ್ದಾಳೆ.' ಅಮ್ಮ ನನಗೆ ಆ ದುರದೃಷ್ಟ ಮಕ್ಕಳ ನೋವಿನ ಕಥೆಯನ್ನು ಹೇಳಿದಳು. ನಾವು ಸಣ್ಣ ಸಣ್ಣ ವಿಷಯದ ಬಗ್ಗೆಯೂ ದೂರು ಹೇಳುತ್ತೇವೆ, ಸಣ್ಣ ವಿಷಯಕ್ಕೆ ಬೇಗನೇ ಅಸಂತುಷ್ಟರಾಗುತ್ತೇವೆ, ಆದರೆ ನಾವು ತುಂಬಾ ಅದೃಷ್ಟವಂತರು, ನಮಗೆ ಒಂದು ದೃಢವಾದ ಮನೆ ಲಭಿಸಿದೆ, ವಿಚ್ಛೇದನ ಪಡೆಯದ ತಂದೆ–ತಾಯಿ ನಮಗಿದ್ದಾರೆ ಎಂದು ನನಗೆ ಅನ್ನಿಸಿತು.

'ನೀವು ಅವರಿಗೆ ಹೇಗೆ ಸಹಾಯವನ್ನು ಮಾಡುತ್ತೀರ?' ನಾನು ಅಮ್ಮನನ್ನು ಕೇಳಿದೆ.

'ನಾವು ಅವರಿಗೆ ಪಾಠವನ್ನು ಬೋಧಿಸುತ್ತೇವೆ. ಅವರ ಶಾಲೆಯ ಹೋಮ್‌ವರ್ಕ್‌ನಲ್ಲಿ ಸಹಾಯ ಮಾಡುತ್ತೇವೆ. ಅಗತ್ಯ ಬಿದ್ದರೆ ಅವರ ಶಾಲೆಗೆ ಹೋಗಿ, ಅವರ ಅಧ್ಯಾಪಕರನ್ನು ಭೇಟಿಯಾಗುತ್ತೇವೆ. ಅವರು ತಮ್ಮ ದಿನಚರಿಯನ್ನು ಹೇಗೆ ಮಾಡಿಕೊಳ್ಳಬೇಕೆಂದು ಯೋಜನೆಗಳನ್ನು ರೂಪಿಸುತ್ತೇವೆ.'

ನಾನು ಡಿನ್ನರ್ ಸಿದ್ಧಪಡಿಸಿದ್ದೆ. ನಾನು ಡೈನಿಂಗ್ ಟೇಬಲ್ ಕಡೆಗೆ ಬೆರಳು ಮಾಡಿ ಹೇಳಿದೆ, 'ಡಿಯರ್ ಮದರ್, ಊಟ ಸಿದ್ಧವಿದೆ. ನಿಮಗೆ ಹಸಿವೆಯಾಗಿರಬೇಕು. ನೀವು ಇಷ್ಟೆಲ್ಲಾ ಶ್ರಮಿಸುತ್ತೀರ...'

'ಓಹ್ ಪಾಲ್, ನೀನು ಅಡುಗೆ ಮಾಡಿದ್ದೀಯ. ಏನು ಮಾಡಿರುವೆ?'

'ನಿನ್ನ ಫೇವರೆಟ್ ಡಿಶ್ – ಆನಿಯನ್ ಟಾರ್ಟ್'. ನಾವಿಬ್ಬರು ನಕ್ಕೆವು.

ಅಮ್ಮ ತನ್ನ ಬೂಟನ್ನು ಕಳಚಿದಳು. ನಂತರ ತನ್ನ ಬಟ್ಟೆಗಳನ್ನು ಬದಲಾಯಿಸಲು ಕೋಣೆಗೆ ಹೋದಳು. ಅಮ್ಮ ಬಟ್ಟೆಗಳನ್ನು ಬದಲಾಯಿಸಿ ಬಂದಾಗ ನಾವಿಬ್ಬರು ಒಟ್ಟಿಗೆ ಕೂತು ಊಟ ಮಾಡಲಾರಂಭಿಸಿದೆವು.

ಬೆಳಿಗ್ಗೆ ಅಮ್ಮ ಅಡ್ಡಾಡುತ್ತಿದ್ದ ಸದ್ದಿನಿಂದ ನನಗೆ ಎಚ್ಚರವಾಯಿತು. ಅಮ್ಮ ನಿತ್ಯ ಬೆಳಿಗ್ಗೆ ಐದು ಗಂಟೆಗೆ ಏಳುತ್ತಿದ್ದಳು, ಅವಳ ಓಡಾಟದಿಂದ ನನಗೆ ಎಚ್ಚರವಾಗುತ್ತಿತ್ತು. ನಾನು ಚಿಕ್ಕವನಿದ್ದಾಗ, ವಯಸ್ಸಾದವರಿಗೆ ಬೆಳ್ಳಂಬೆಳಿಗ್ಗೆ ಏಳುವ

## ಕಳೆದ ಸಂಚಿಕೆಯಲ್ಲಿ



ಮೊದಲ ಪತ್ನಿಯೊಂದಿಗಿನ ವಿಚ್ಛೇದನದ ಸಂದರ್ಭದಲ್ಲಿ ನಡೆದ ವಿಚಾರಣೆ ಪಾಲ್‌ನನ್ನು ಸಾಕಷ್ಟು ಇಕ್ಕಟ್ಟಿಗೆ ಸಿಲುಕಿಸಿತ್ತು. ಬಿಡುಗಡೆ ಬಯಸಿದ್ದ ಸಂಗಾತಿ ಸಾಕಷ್ಟು ಆರೋಪಗಳನ್ನು ಹೊರಿಸಿದ್ದಳು. ಬೇಜವಾಬ್ದಾರಿ ಗಂಡ, ಬೇಜವಾಬ್ದಾರಿ ತಂದೆ ಎನ್ನುವ ಆರೋಪಗಳನ್ನು ಪಾಲ್ ಕೇಳಿಸಿಕೊಳ್ಳಬೇಕಾಯಿತು. ಪಾಲ್‌ನ ಪರವಾಗಿ ಸಾಕಷ್ಟು ಸಾಕ್ಷಿಗಳು ಇದ್ದರೂ, ಅಂತಿಮವಾಗಿ ನ್ಯಾಯಾಲಯ ಅವನಿಗೆ ವಿರುದ್ಧವಾಗಿಯೇ ತೀರ್ಪು ನೀಡಿತು. ಇಬ್ಬರು ಮಕ್ಕಳ ಕಸ್ಟಡಿ ತಾಯಿಯ ಪಾಲಿಗೆ ಹೋಯಿತು. ಅವರ ಖರ್ಚು ವೆಚ್ಚಗಳನ್ನು ಪಾಲ್ ನೋಡಿಕೊಳ್ಳಬೇಕಾಯಿತು. ಮಕ್ಕಳಿಗೆ ಸಂಬಂಧಿಸಿದ ನಿರ್ಧಾರಗಳಲ್ಲಿ ಇಬ್ಬರೂ ಜವಾಬ್ದಾರರಾದರು. ಬಿಡುವಿನ ಸಮಯದಲ್ಲಿ ಅಪ್ಪನ ಬಳಿ ಬಂದ ಸೋದರಿಯರು ತಮ್ಮೊಂದಿಗೆ ಮಲ ಸಹೋದರನನ್ನೂ ಕರೆತಂದರು. ಮೂವರನ್ನೂ ಪಾಲ್ ಪ್ರೀತಿಯಿಂದ ನಡೆಸಿಕೊಂಡ. ಆದರೆ, ತನ್ನ ಪುತ್ರಿಯರು ಮಲ ತಂದೆಯ ಹೆಸರನ್ನು ತಮ್ಮ ಹೆಸರಿನೊಂದಿಗೆ ಇರಿಸಿಕೊಂಡಿದ್ದನ್ನು ಸಹಿಸುವುದು ಅವನಿಗೆ ಸಾಧ್ಯವಾಗಲಿಲ್ಲ. ತಂದೆಯ ನಡವಳಿಕೆ ಮಕ್ಕಳಿಗೂ ಅನಿರೀಕ್ಷಿತವಾಗಿತ್ತು. ಕೊನೆಗೆ, ಅಪ್ಪನ ಮನಸ್ಸಿಗೆ ವಿರುದ್ಧವಾಗಿ ನಡೆದುಕೊಳ್ಳದಿರಲು ಮಕ್ಕಳು ನಿರ್ಧರಿಸಿದರು.